# ಕರ್ನಾಟಕ ಸರ್ಕಾರ

ಸಂಖ್ಯೆ:ಡಿಪಿಎಆರ್ 14 ಎಸ್‌ಟಿಆರ್ 86,

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ
ಬೆಂಗಳೂರು, ದಿನಾಂಕ 7-11-1986

## ಅಧಿಕೃತ ಜ್ಞಾಪನ

**ವಿಷಯ:** ಅಂಗವಿಕಲರ ನೌಕರರ ವರ್ಗಾವಣೆ ಮತ್ತು ಅವರಿಗೆ ಅಗತ್ಯ ಸೌಲಭ್ಯಗಳನ್ನು ಒದಗಿಸುವ ಬಗ್ಗೆ.

**ಉಲ್ಲೇಖ:** ಅಧಿಕೃತ ಜ್ಞಾಪನ ಸಂಖ್ಯೆ:ಡಿಪಿಎಆರ್ 9 ಎಸ್‌ಟಿಆರ್ 84, ದಿನಾಂಕ 5-9-1985.

ವರ್ಗಾವಣೆಗೆ ಸಂಬಂಧಿಸಿದಂತೆ ಮಾರ್ಗಸೂಚಿ ಹೊರಡಿಸಲು ಅಧಿಕೃತ ಜ್ಞಾಪನ ಸಂಖ್ಯೆ:ಡಿಪಿಎಆರ್ 9 ಎಸ್‌ಟಿಆರ್ 84, ದಿನಾಂಕ 5-9-1985ರಲ್ಲಿ ಅಂಗವಿಕಲರನ್ನು ಅದರಲ್ಲೂ ಕುರುಡರನ್ನು ಸಹಾನುಭೂತಿಯಿಂದ ನೋಡಬೇಕೆಂದು ಅವರಿಗೆ ವರ್ಗಾವಣೆಯ ಸಾಮಾನ್ಯ ನಿಯಮಗಳಲ್ಲಿ ರಿಯಾಯಿತಿಯನ್ನು ನೀಡಲು ಸೂಚಿಸಲಾಗಿದೆ. ಆದುದರಿಂದ, ಅಂಗವಿಕಲ ನೌಕರರನ್ನು ಅವರ ಕಾರ್ಯನಿಷ್ಠೆಯ ಬಗ್ಗೆ ಯಾವುದೇ ಆಕ್ಷೇಪವಿದ್ದಲ್ಲಿ ಒಂದೇ ಸ್ಥಳದಲ್ಲಿ ನಿಗದಿತ ಅವಧಿಗಿಂತ ಹೆಚ್ಚು ಕಾಲ ಮುಂದುವರೆಸಬಹುದು. ಒಂದು ವೇಳೆ ವರ್ಗಾವಣೆ ಮಾಡಬೇಕಾದುದು ಅತ್ಯವಶ್ಯವಾದಲ್ಲಿ ಅಥವಾ ಅವರಿಗೆ ಬಡ್ತಿ ಕೊಟ್ಟಾಗ ವರ್ಗಾವಣೆ ಅತ್ಯವಶ್ಯವಾದಾಗ ಅಮಗವಿಕಲರನ್ನು ಅವರ ಇಚ್ಛೆ ವಿರುದ್ಧ ವರ್ಗಾಯಿಸುವ ಪ್ರಕರಣಗಳು ಅತಿ ವಿರಳವಾಗಿರಬೇಕೆಂದು ಸರ್ಕಾರ ಒತ್ತಿ ಹೇಳಬಯಸುತ್ತದೆ.ಅಂಗವಿಕಲ ನೌಕರರು ಆದ್ಯತೆ ನೀಡಿದ ಸ್ಥಳಕ್ಕೇ ವರ್ಗಾವಣೆ ಮಾಡಬೇಕು.

2\. ಕೆಲವು ಅಂಗವಿಕಲರ ನೌಕರರಿಗೆ ಅವರ ಅಂಗವಿಕಲತೆಯಿಂದಾಗಿ ಮೇಲಿನ ಮಹಡಿಗಳನ್ನು ಏರಿ ಹೋಗಿ ಕೆಲಸ ಮಾಡುವುದು ಪ್ರಯಾಸವಾಗುವುದು ಸಹಜ. ಹಾಗೂ ಸಾಮಾನ್ಯ ನೌಕರರಿಗೆ ಒದಗಿಸಲಾದ ಪೀಠೋಪಕರಣಗಳನ್ನು ಉಪಯೋಗಿಸಿಕೊಂಡು ಕೆಲಸ ಮಾಡುವುದು ಕಷ್ಟದಾಯಕವಾಗಿರಬಹುದು. ಅಂಥ ಸಂಧರ್ಭಗಳಲ್ಲಿ ಕಚೇರಿ ಕೆಲಸಕ್ಕೆ ಲಭ್ಯವಿರುವ ಸ್ಥಳಾವಕಾಶವನ್ನು ಮಾಡಿಕೊಡಬೇಕಾಗುದುದು ಕಚೇರಿ ಮುಖ್ಯಸ್ಥರ ಕರ್ತವ್ಯ ಎಂದು ಭಾವಿಸಿ ಅದರಂತೆ ಸಾಧ್ಯವಾದ ಕ್ರಮ ತೆಗೆದುಕೊಳ್ಳಬೇಕು ಮತ್ತು ಅಂಗವಿಕಲರ ವೈಯಕ್ತಿಕ ಅಂಗವಿಕಲತೆಯನ್ನು ಗಮನಿಸಿ ಅವಶ್ಯವಿದ್ದರೆ ಅನುಕೂಲವಾದ ಪೀಠೋಪಕರಣಗಳನ್ನು ಅವರಿಗೆ ಒದಗಿಸಿಕೊಡಬೇಕು. ಅಂಗವಿಕಲರನ್ನು ವರ್ಗಾಯಿಸಬೇಕಾದ ವಿರಳ ಪ್ರಸಂಗಗಳಲ್ಲಿ ಅವರಿಗಾಗಿ ಮಾಡಿಸಿರಬಹುದಾದ ವಿಶೇಷ ಪೀಠೋಪಕರಣಗಳನ್ನು ಅವರು ವರ್ಗಾಯಿಸಿಲ್ಪಟ್ಟ ಊರನಲ್ಲಿ/ ಕಚೇರಿಯಲ್ಲಿ ಅವರ ಸಾಗಿಸುವ ವ್ಯವಸ್ಥೆ ಮಾಡಬಹುದು.

ಸಹಿ
(ಎಲ್. ರವೀಂದ್ರ)
ಸರ್ಕಾರದ ಅಧೀನ ಕಾರ್ಯದರ್ಶಿ, ಸಿಬ್ಬಂದಿ ಮತ್ತು
ಆಡಳಿತ ಸುಧಾರಣೆ ಇಲಾಖೆ (ಸೇವಾ ನಿಯಮಗಳು)

Kiran Raghupathi